# ಮೃತ್ಯುನಂತರದ ಕ್ರಿಯಾಕರ್ಮಗಳ ಶಾಸ್ತ್ರ

## ಮನೋಗತ

ಮನುಷ್ಯನ ಜನ್ಮದಿಂದ ಮೃತ್ಯುವಿನವರೆಗೆ ಘಟಿಸುವ ವಿವಿಧ ಪ್ರಸಂಗಗಳಿಂದ ಅವನಿಗೆ ಈಶ್ವರನ ಸಮೀಪ ಹೋಗಲು ಸಾಧ್ಯವಾಗಬೇಕೆಂದು, ಹಿಂದೂ ಧರ್ಮದಲ್ಲಿ ವಿವಿಧ ಧಾರ್ಮಿಕ ಸಂಸ್ಕಾರಗಳನ್ನು ಹೇಳಲಾಗಿದೆ. ಅವುಗಳಲ್ಲಿ ಮೃತ್ಯುವಿನ ನಂತರ ಮಾಡುವ ಕ್ರಿಯಾಕರ್ಮಗಳು ಅಂತಿಮ ಸಂಸ್ಕಾರಗಳಾಗಿವೆ.

ಬಹಳಷ್ಟು ಸಲ ಮೃತ್ಯೋತ್ತರ ಕ್ರಿಯಾಕರ್ಮಗಳನ್ನು ಕೇವಲ ಧರ್ಮಶಾಸ್ತ್ರದಲ್ಲಿ ಹೇಳಲಾಗಿದೆಯೆಂದು ಅಥವಾ ಕುಟುಂಬದವರ ಕರ್ತವ್ಯಪಾಲನೆಯೆಂದು ಮಾಡಲಾಗುತ್ತದೆ; ಬಹುತಾಂಶ ಜನರಿಗೆ ಅವುಗಳ ಮಹತ್ವ ಅಥವಾ ಅವುಗಳ ಹಿಂದಿನ ಆಧ್ಯಾತ್ಮಿಕ ಕಾರಣಗಳು ತಿಳಿದಿರುವುದಿಲ್ಲ. ಅವರಿಗೆ ಕೃತಿಗಳ ಹಿಂದಿನ ಶಾಸ್ತ್ರವು ತಿಳಿದರೆ ಆ ಕೃತಿಗಳ ಬಗ್ಗೆ ಅವರಲ್ಲಿ ವಿಶ್ವಾಸ ಹೆಚ್ಚಾಗುತ್ತದೆ ಮತ್ತು ಮಹತ್ವವು ಗಮನಕ್ಕೆ ಬಂದು, ಆ ಕೃತಿಗಳು ಹೆಚ್ಚಿನ ಶ್ರದ್ಧೆಯಿಂದಾಗುತ್ತವೆ. 'ಯಾವ ಕಾರ್ಯವನ್ನು ಶ್ರದ್ಧಾಪೂರ್ವಕವಾಗಿ ಮಾಡಲಾಗುತ್ತದೆಯೋ ಅದರ ಫಲವು ಸಂಪೂರ್ಣವಾಗಿ ಸಿಗುತ್ತದೆ',

ಈ ರೀತಿ ಶ್ರದ್ಧೆಯ ಮಹತ್ವವನ್ನು ಹೇಳಲಾಗಿದೆ. ಈ ದೃಷ್ಟಿಕೋನದಿಂದ ಮೃತ್ಯೋತ್ತರ ಕ್ರಿಯಾಕರ್ಮಗಳನ್ನು ಮಾಡುವಾಗ ಸಂಪೂರ್ಣ ಶ್ರದ್ಧೆ ನಿರ್ಮಾಣವಾಗಬೇಕೆಂದು ಈ ಕಿರುಗ್ರಂಥದಲ್ಲಿ ಕೆಲವೊಂದು ಮೃತ್ಯೋತ್ತರ ವಿಧಿಗಳ ಹಿಂದಿನ ಅಧ್ಯಾತ್ಮಶಾಸ್ತ್ರವನ್ನು ಕೊಡಲಾಗಿದೆ.

ಮೃತ್ಯೋತ್ತರ ಕ್ರಿಯಾಕರ್ಮಗಳನ್ನು ಶ್ರದ್ಧೆಯಿಂದ ಮತ್ತು ವಿಧಿಗಳಿಗನುಸಾರ ಮಾಡಿದರೆ ಮೃತ ವ್ಯಕ್ತಿಯ ಲಿಂಗದೇಹವು ಭೂಲೋಕದಲ್ಲಿ ಅಥವಾ ಮೃತ್ಯುಲೋಕದಲ್ಲಿ ಸಿಲುಕಿಕೊಳ್ಳದೆ ಅದಕ್ಕೆ ಸದ್ಗತಿಯು ಸಿಗುತ್ತದೆ ಮತ್ತು ಅದು ಮುಂದಿನ ಲೋಕಕ್ಕೆ ಹೋಗುತ್ತದೆ. ಇದರಿಂದ ಇಂತಹ ಲಿಂಗದೇಹವು ಕೆಟ್ಟ ಶಕ್ತಿಗಳ ಹಿಡಿತದಲ್ಲಿ ಸಿಲುಕುವ ಹಾಗೂ ಅದರಿಂದ (ಪೂರ್ವಜರಿಂದ) ಕುಟುಂಬದವರಿಗೆ ತೊಂದರೆ ಯಾಗುವ ಸಾಧ್ಯತೆಯೂ ಕಡಿಮೆಯಾಗುತ್ತದೆ.

ಈ ಕಿರುಗ್ರಂಥವನ್ನು ಓದಿ ಮೃತ್ಯೋತ್ತರ ಕ್ರಿಯಾ ಕರ್ಮಗಳ ಮಹತ್ವವು ಹಿಂದೂಗಳ ಗಮನಕ್ಕೆ ಬರಲಿ ಮತ್ತು ಅವರಲ್ಲಿ ಧರ್ಮದ ಬಗೆಗಿನ ಶ್ರದ್ಧೆಯು ಇನ್ನೂ ಹೆಚ್ಚಾಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ

**- ಸಂಕಲನಕಾರರು**

# ಅನುಕ್ರಮಣಿಕೆ


卐 **ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ** ೭

卐 **ಆಧ್ಯಾತ್ಮಿಕ ಪರಿಭಾಷೆಯಲ್ಲಿನ ಪ್ರಸ್ತಾವನೆ !** ೧೧

卐 **ಮನೋಗತ** ೧೩

೧. ಮರಣ ಹೊಂದುವಾಗ ಬಾಯಿಯಲ್ಲಿ ನಾಮವಿರುವುದರ ಮಹತ್ವ ೧೫

೨. ಮರಣೋನ್ಮುಖ ವ್ಯಕ್ತಿಯ ಸಂದರ್ಭದಲ್ಲಿ ಮಾಡಬೇಕಾದ ಕೃತಿಗಳು ೧೭

೩. ಮೃತ್ಯುವಿನ ಮೊದಲು ಮಾಡಬೇಕಾದ ಸಿದ್ಧತೆ ೨೦

೪. ವ್ಯಕ್ತಿಯು ಮೃತನಾದ ನಂತರ ೧೩ ದಿನಗಳ ವರೆಗೆ ಮಾಡಬೇಕಾದ ಮಹತ್ವದ ಕೃತಿಗಳು ೨೦

೫. ಮೃತ್ಯುವಿನ ದಿನ ಮಾಡುವ ಕೃತಿಗಳ ಹಿಂದಿನ ಶಾಸ್ತ್ರ ೪೨

೬. ಮೃತ ವ್ಯಕ್ತಿ ಬಳಸಿದ ವಸ್ತುಗಳನ್ನು ಏನು ಮಾಡಬೇಕು? ೫೮

೭. ಸೂತಕ (ಮರಣಾಶೌಚ) ೬೦

೮. ಅಸ್ಥಿಸಂಚಯ ಮತ್ತು ಅಸ್ಥಿವಿಸರ್ಜನೆ ೬೨

೯. ಪಿಂಡದಾನ ೬೩

೧೦. ಮೃತ್ಯುವಿನ ನಂತರ ೧೦ ನೆಯ, ೧೨ ನೆಯ ಮತ್ತು ೧೩ ನೆಯ ದಿನ ಮಾಡುವ ವಿಧಿಗಳ ಮಹತ್ವ ೬೬